ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Tuesday, the 23rd March 1982, Chaitra 2, 1904 S-E.

The House met in the Assembly Chamber, Vidhana Soudha, at One of the Clock.

MR. SPEAKER (SRI K. H. RANGANATH) in the Chair.

STARRED QUESTIONS
(to which oral answers were given)

Cleaning of SKR and Russel Markets

38 SRI I. P. D. SALAPPA (Binnipet).— Will the Minister for Housing and Urban Development be plased to state:—

(a) whether cleaning of S.K.R. and Russel Markets have been given for lease;

(b) if so, the amount of lease to be paid every month;

(c) the particulars of lessees;

(d) whether it is not a fact that an inservice Health Inspector has procured the lease in the name of his relatives?

SRI DHARAM SINGH (Minister for Housing and Urban Development

(a) Only cleaning of S. K. R. Market is given for lease.

(b) The lease amount is Rs. 96.783 per mensum.

(c) M/S Sarvodaya Cleaning Corporation, No. 29. 4th Black. 3rd Stage. West of Chord Road, Bangalore.

(d) No.

ಶ್ರೀ ಐ. ಪಿ. ಡಿ. ಸಾಲಪ್ಪ.— ಮಾನ್ಯ ಅಧ್ಯಕ್ಷರೇ, ನಾನು ಈ ಪ್ರಶ್ನೆ ಕಳುಹಿಸಿದಾಗ ಶ್ರೀ ಕೃಷ್ಣ ರಾಜೇಂದ್ರು ಮಾರುಕಟ್ಟೆ ಮತ್ತು ರಸೆಲ್ ಮಾರುಕಟ್ಟೆ ಎರಡನ್ನೂ ಗುತ್ತಿಗೆಗೆ ಕೊಟ್ಟಿದ್ದರು. ಆದರೆ. ಉತ್ತರ ಕೊಡುವಾಗ ಒಂದೇ ಮಾರ್ಕೆಟ್ಟಿನ ವಿಚಾರ ಹೇಳಿದ್ದಾರೆ. ಇನ್ನೊಂದು ಮಾರ್ಕೆಟ್ಟನ್ನು ಗುತ್ತಿಗೆಗೆ ಕೊಟ್ಟಿಲ್ಲ ನಾವೇ ಕೆಲಸ ಮಾಡಿಸುತ್ತಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ನೋಡಿದಾಗ ನಗರ ಕಾರ್ಪೊರೇಷನ್ನಿನವರು ಸರಿಯಾದ ಉತ್ತರವನ್ನು ಒದಗಿಸಿಕೊಟ್ಟಿಲ್ಲ ಎಂದು ನನ್ನ ವ್ಯಥೆ.

ಅಧ್ಯಕ್ಷರು.— ಸರ್ಕಾರದಿಂದ ಅಧಿಕೃತವಾಗಿ ಉತ್ತರ ಅಚ್ಚಾದಮೇಲೆ ಅದು ಸರ್ಕಾರದ ಉತ್ತರ ವಾಗುತ್ತದೆ. ಆದರಲ್ಲೇನಾದರೂ ತಪ್ಪಾಗಿದ್ದರೆ ತಾವು ಪ್ರಶ್ನೆ ಕೇಳುವಾಗ ತಪ್ಪು ಎಂದು ಪ್ರೂವ್ ಮಾಡಿ.

ಶ್ರೀ ಐ.ಪಿ.ಡಿ. ಸಾಲಪ್ಪ.– ಆಗಲಿ ಸ್ವಾಮಿ. ಶ್ರೀ ಕೃಷ್ಣರಾಜೇಂದ್ರ ಮಾರ್ಕೆಟ್ಟಿನ ಸ್ವಚ್ಛತೆ ಕೆಲಸಕ್ಕೆ ಗುತ್ತಿಗೆಗೆ ಕೊಟ್ಟಿದ್ದೀರಲ್ಲ ಈ ಗುತ್ತಿಗೆ ಕೊಡುವುದಕ್ಕಿಂತ ಮೊದಲು ಅಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದರು ಎಂಬುದನ್ನು ಮಾನ್ಯ ಮಂತ್ರಿಗಳು ಹೇಳುವುದಕ್ಕೆ ಸಾಧ್ಯವೇ? ಮೊದಲು ಎಷ್ಟು ಜನ ಕೆಲಸ ಮಾಡುತ್ತಿದ್ದರೋ ಅದರ ನಾಲ್ಕರಷ್ಟು ಜನ ಈಗ ಗುತ್ತಿಗೆ ಕೊಟ್ಟಮೇಲೆ ಮಾಡುತ್ತಿದ್ದಾರೆ. ಆದರೆ ಸಿಗುತ್ತಿರತಕ್ಕ ಸಂಬಳ ಮಾತ್ರ ನಾಲ್ಕು ರೂಪಾಯಿಗಳು. ಆಂದರೆ ಅಲ್ಲಿ ಶೋಷಣೆ ನಡೆಯುತ್ತಿದೆ. ಕಂಟೋನ್ಮೆಂಟ್ ಮಾರ್ಕೆಟ್ಟಿನಲ್ಲಿ ಗುತ್ತಿಗೆ ಕೊಟ್ಟಿದ್ದನ್ನು ನಿಲ್ಲಿಸಿ ಕಾರ್ಪೊರೇಷನ್ನಿನವರೇ ಹೇಗೆ ಕೆಲಸ ಮಾಡಿಸುತ್ತಿದ್ದಾರೋ ಆದೇ ರೀತಿ ಕೃಷ್ಣರಾಜೇಂದ್ರ ಮಾರ್ಕೆಟ್ಟಿನಲ್ಲಿ ಕೊಟ್ಟಿರತಕ್ಕ ಗುತ್ತಿಗೆಯನ್ನು ನಿಲ್ಲಿಸಿ ಕಾರ್ಪೊರೇಷನ್ನಿನವರೇ ಕೆಲಸ ಮಾಡುವುದಕ್ಕೆ ಸಾಧ್ಯವೆ?

ಶ್ರೀ ಧರ್ಮಸಿಂಗ್.— ಮಾನ್ಯ ಅಧ್ಯಕ್ಷರೆ, ಶ್ರೀ ಕೃಷ್ಣರಾಜೇಂದ್ರ ಮಾರ್ಕೆಟ್ಟಿನಲ್ಲಿ ಗುತ್ತಿಗೆ ಕೊಡುವುದು ಪ್ರಾರಂಭವಾದದ್ದು ೧೯೭೬ರಲ್ಲಿ. ಅಲ್ಲಿ ೨೪ ಗಂಟೆ ಕೆಲಸ ಇದೆ. ರಾತ್ರಿ ೧೨ ಗಂಟೆ ಆದನಂತರವೂ ಕೆಲಸ ಪ್ರಾರಂಭ ಮಾಡಬೇಕಾಗುತ್ತದೆ. ಬೆಳ್ಳಿಗ್ಗೆ ೬ ಗಂಟೆಯಿಂದಲೂ ಕೆಲಸ ಮಾಡಬೇಕಾಗುತ್ತದೆ ಪೌರ ಕಾರ್ಮಿಕರಿಗೆ ೨೪ ಗಂಟೆಯೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಅದಕ್ಕೊಸ್ಕರ ಕಂಟ್ರಾಕ್ಟ್ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಮೊದಲಿದಕ್ಕಿಂತ ನಾಲ್ಕು ಪಟ್ಟು ಜನರು ಕೆಲಸ ಮಾಡುತ್ತಿದ್ದರೂ ಅವರಿಗೆ ೪ ರೂಪಾಯಿ ಸಂಬಳ ಸಿಗುತ್ತದೆ. ಎಂದು ಹೇಳುತ್ತಿದ್ದಾರೆ ನಾವು ಕೆಲಸವನ್ನು ಕಂಟ್ರಾಕ್ಟರಿಗೆ ವಹಿಸಿಕೊಡುತ್ತೇವೆ. ಸಂಬಳ ಕೊಡುವುದು ಅವರಿಗೆ ಬಿಟ್ಟಿದ್ದು. ಕಂಟ್ರಾಕ್ಟರುಗಳಲ್ಲಿ ಯಾರು ಹೆಚ್ಚು ಬಿಡ್ ಮಾಡುತ್ತಾರೋ ಅವರಿಗೆ ನಾವು ಕೆಲಸ ಕೊಡುತ್ತೇನೆ. ನಮ್ಮ ಕೆಲಸ ಕಂಟ್ರಾಕ್ಟರ್ ಸರಿಯಾಗಿ ಕೆಲಸ ಮಾಡುತಾನೋ ಇಲ್ಲವೊ ಎಂದು ನೋಡುವುದು. ಆದರೆ ಮಾನ್ಯ ಸದಸ್ಯರು ಕಂಟ್ರಾಕ್ಟರ್ ಕಾರ್ಮಿಕರನ್ನು ಶೋಷಣೆ ಮಾಡುತ್ತಿದ್ದಾರೆ. ಎಂದು ಏನು ಹೇಳುತ್ತಿದ್ದಾರೋ ಅದು ನಮಗೆ ಸಂಬಂಧಿಸಿದ್ದಲ್ಲ. ಅದು ಕಾಂಟ್ರಾಕ್ಟರಿಗೂ ಕೆಲಸ ಗಾರರಿಗೂ ಸಂಬಂಧಿಸಿದ ವಿಷಯ.

ಶ್ರೀ ಐ.ಪಿ.ಡಿ. ಸಾಲಪ್ಪ.-ಸರ್ಕಾರದ ನೀತಿ ಯಾವಾಗಲೂ ಒಂದೇ ಇರಬೇಕು ಕಂಟೋನ್ಮೆಂಟ್ ಮಾರ್ಕೆಟ್ ನಲ್ಲಿ ಗುತ್ತಿಗೆ ಕೊಟ್ಟಿದ್ದನ್ನು ರದ್ದು ಮಾಡಿ ಸಿಟಿ ಮಾರ್ಕೆಟ್‌ನಲ್ಲಿ ಗುತ್ತಿಗೆ ಕೊಟ್ಟಿರುವುದನ್ನು ಮುಂದು ವರೆಸಿಕೊಂಡು ಹೋಗಿರಬೇಕಾದರೆ ಅದರಲ್ಲಿ ಏನೋ ಸ್ಪೆಷಲ್ ಇಂಟರೆಸ್ಟ್ ಇದೆ ಎಂದು ಗೊತ್ತಾಗುತ್ತದೆ ಕಂಟೋನ್ಮೆಂಟ್ ಮಾರ್ಕೆಟ್‌ನಲ್ಲಿ ಮಾಡುವಂತೆಯೆ ಕೃಷ್ಣರಾಜೇಂದ್ರ ಮಾರುಕಟ್ಟೆಯಲ್ಲೂ ಕಾರ್ಮಿಕರನ್ನು ಇಟ್ಟುಕೊಂಡು ಈ ಕಾರ್ಮಿಕರಿಗೇ ಕಾರ್ಪೋರೇಷನ್ನಿನವರು ಏತಕ್ಕೆ ಹೆಚ್ಚಿಗೆ ಸಂಬಳ ಕೊಡಬಾರದು.

ಶ್ರೀ ಧರ್ಮಸಿಂಗ್.— ಕಂಟೋನ್ಮೆಂಟ್ ಮಾರ್ಕೆಟ್ಟ್‌ನಲ್ಲಿ ಕೆಲಸ ಕಡಿಮೆ ಇದೆ. ಅಲ್ಲಿ ದಿನಗೂಲಿ ಮೇಲಿನ ಕೆಲಸ ಮಾಡಿಸುತ್ತಿದ್ದಾರೆ. ಅಲ್ಲಿ ರಾತ್ರಿ ಹಗಲು ಮಾಡುವಷ್ಟು ಕೆಲಸ ಇಲ್ಲ. ಆದ್ದರಿಂದ ಅಲ್ಲಿ ಗುತ್ತಿಗೆಯನ್ನು ರದ್ದು ಮಾಡಿದ್ದೇವೆ. ಕೃಷ್ಣರಾಜೇಂದ್ರ ಮಾರುಕಟ್ಟೆಯಲ್ಲಿ ಗುತ್ತಿಗೆಯನ್ನು ಮುಂದು ವರೆಸಿಕೊಂಡು ಹೋಗುವುದರಲ್ಲಿ ನಮಗೇನೂ ವಿಶೇಷ ಆಸಕ್ತಿ ಇಲ್ಲ. ಟೆಂಡರ್ ಕಾಲ್‌ಫರ್ ಮಾಡಿ ಯಾರು ಹೆಚ್ಚಿಗೆ ಬಿಡ್ ಮಾಡಿದ್ದಾರೋ ಅವರಿಗೆ ಕೆಲಸ ಕೊಟ್ಟಿದ್ದೇವೆ. ಇದರಲ್ಲಿ ಯಾವ ನೆಪೋಟಿ ಸಂ ಮತ್ತು ಫೇವರಿಟಿಸಂ ಇಲ್ಲ.

ಶ್ರೀ ಐ.ಪಿ.ಡಿ. ಸಾಲಪ್ಪ,— ಮಾನ್ಯ ಅಧ್ಯಕ್ಷರೆ, ಈ ವಿಷಯ ಮಾನ್ಯ ಮಂತ್ರಿಗಳಿಗೂ ಗೊತ್ತಿರಬೇಕು ಎಂದು ಕಾಣುತ್ತದೆ. ಅಲ್ಲಿ ಗುತ್ತಿಗೆ ಕೊಡುವುದಕ್ಕಿಂತ ಮೊದಲು ಕೇವಲ ೭೦ ಜನ ಇದ್ದರು. ಆಗ ಸಂಬಳ ೩೦೦ ರೂಪಾಯಿ ಇತ್ತು. ಆಂದರೆ ತಿಂಗಳಿಗೆ ೧೮ ಸಾವಿರ ರೂಪಾಯಿ ಖರ್ಚು ಬರುತ್ತಿತ್ತು. ಈಗ ತಿಂಗಳಿಗೆ೬೭೫ ರೂಪಾಯಿ ಖರ್ಚು ಮಾಡುತ್ತಿದ್ದಾರೆ ೧೮ ಸಾವಿರ ಖರ್ಚಿನಲ್ಲಿ ಕೆಲಸ ಆಗುತ್ತಿದ್ದುದನ್ನು ೪೬ ಸಾವಿರ ರೂಪಾಯಿಗೆ ಏರಿಸಿರಬೇಕಾದರೆ ಅದರಲ್ಲಿ ವಿಶೇಷ ಆಸಕ್ತಿ ಇರಬೇಕು ಆದ್ದರಿಂದ ನಾನು ಕೇಳುತ್ತಿರುವುದು ಏದೇ ೪೬ ಸಾವಿರ ರೂಪಾಯಿಗಳನ್ನು ಕಾರ್ಮಿಕರಿಗೇ ಖರ್ಚು ಮಾಡಿ ಕಾರ್ಪೊರೇಷನ್‌ನವರೇ ಕಾರ್ಮಿಕರನ್ನು ಇಟ್ಟುಕೊಂಡು ಕೆಲಸ ಮಾಡಿಸುವುದಕ್ಕೆ ಆಗುವುದಿಲ್ಲವೆ?

ಶ್ರೀ ಧರ್ಮಸಿಂಗ್.— ಮಾನ್ಯ ಅಧ್ಯಕ್ಷರೆ, ಎಲ್ಲಾ ನಗರ ಸಭೆಗಳಲ್ಲೂ ಯೂನಿಯನ್‌ಗಳಿವೆ. ಅದೇ ರೀತಿ ಮಾನ್ಯ ಸಾಲಪ್ಪನವರ ಯೂನಿಯನ್ ಕೂಡ ಇದೆ. ೨೪ ಗಂಟೆ ಕೆಲಸ ಮಾಡಿಸಬೇಕು ಎಂದು ರಾತ್ರಿ ೧ ಗಂಟೆಗೆ ಗುಡಿಸಲುಗಳ ಹತ್ತಿರ ಹೋದರೆ ಇವರೇ ನಮ್ಮ ಮೇಲೆ ಬೀಳುತ್ತಾರೆ, ಏತಕ್ಕೆ ಕರೆಯುತ್ತೀರಿ ಎಂದು. ಆ ದೃಷ್ಟಿಯಿಂದಲೇ ಕಂಟ್ರಾಕ್ಟ್ ಕೊಟ್ಟಿದ್ದೇವೆ. ೪೬ ಸಾವಿರ ರೂಪಾಯಿ

ಖರ್ಚುಮಾಡುತ್ತಿರುವುದು ಜಾಸ್ತಿಯಾಗಿದೆ, ಆದರೆ ಬದಲು ಪೌರಕಾರ್ಮಿಕರನ್ನು ನೇಮಿಸಿಕೊಂಡು ಕೆಲಸ ತೆಗೆದುಕೊಳ್ಳಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಪೌರಕಾರ್ಮಿಕರನ್ನು ನೇಮಿಸಿ ಕೊಂಡು ಮಾಡಿಸಬೇಕಾದರೆ ಒಂದೂವರೆ ಲಕ್ಷ ರೂಪಾಯಿ ಖರ್ಚಾಗುತ್ತದೆ. ಅದನ್ನೆಲ್ಲಾ ನೋಡಿಯೇ ನಾವು ಗುತ್ತಿಗೆಗೆ ಕೊಟ್ಟಿರುವುದು. ಇದರಲ್ಲಿ ಯಾವ ತರಹದ ವಿಶೇಷ ಆಸಕ್ತಿಯೂ ಇಲ್ಲ. ಟೆಂಡರ್ ಕಾಲ್‌ಫರ್ ಮಾಡಿದ್ದೇವೆ, ಹೆಚ್ಚು ಬಿಡ್ ಮಾಡಿದವರಿಗೆ ಕೆಲಸ ವಹಿಸಿಕೊಟ್ಟಿದ್ದೇವೆ.

*** Amount advanced by the Govt, and the BDCC Bank to the Hadaggali Sugar Factory Bellary**

150 SRI M. RAMAPPA (Kurugodu).— Will the Minister for Co-operation be pleased to state.—

a) the amount advanced by the Government and by the Bellary District Central Co-operative Bank te the Hadagali Sugar Factory. Ballary Taluk. before liquidation(may please be furnished)

(*b*) whether the money was advanced after the receipt of the expert Committees report, if so, the recommendation of the Committee for such advances (may please be furnished);

(*c*) measures taken by Government for the recovery of the money so far and the amount recovered so far; (may please be furnished)

(*d*) the persons responsible for mis-appropriation of the funds of the factory and the action against them;

(*e*) the amount still to be paid to the ryots towards the purchase of sugarcane (may please be furnished)?

SRI H. C. SRIKANTAIAH (Minister for Co-operation):—

(*a*) The details of amount advanced by the Government and by the BDCC Bank Ltd. Hospet to the Hire Hadagali Sugarcane Co-operative Socicty as on date of liquidation are as under;

Government amount before liquidation.

1	Share capital	Rs.	1,50,000
2	Working capital loan	Rs.	2,50,000
3	Godown loan	Rs.	9.375
4	Godown subsidy	Rs.	3,125
	Total	Rs.	4.12,500